






ಗಿಡಗಳೇ ನನ್ನ ಸಂಗಾತಿಗಳು' ಅಂತ ಹೇಳುತ್ತಾ ಭಾವುಕರಾಗುತ್ತಾರೆ. ಇಲ್ಲಿರುವ ಹಣ್ಣು ತರಕಾರಿ ಸೊಪ್ಪು ಎಲ್ಲವೂ ಸಾವಯವದ್ದೇ ಎಂಬುದು ಮತ್ತೊಂದು ವಿಶೇಷ.

ಇಲ್ಲಿಯ ತರಗಲೆಗಳು ಮತ್ತು ಅಡುಗೆಮನೆಯ ಹಸಿ ತ್ಯಾಜ್ಯದಿಂದ ದೊಡ್ಡ ಪ್ಲಾಸ್ಟಿಕ್ ಡ್ರಮ್‌ಗಳಲ್ಲಿ ಸಾವಯವ ಗೊಬ್ಬರವನ್ನು ತಯಾರಿಸುತ್ತಾರೆ. ಮನೆಗೆ ಬೇಕಾಗುವ ಪಾಲಕ್, ರಾಜಗಿರಿ, ಮೆಂತೆಸೊಪ್ಪು, ಪುಂಡಿಪಲ್ಯ, ಬೆಂಡೆಕಾಯಿ, ಟೊಮ್ಯಾಟೊ, ಚೌಳಿಕಾಯಿ, ಕ್ಯಾಪ್ಸಿಕಂ, ಬೀನ್ಸ್, ಗಜ್ಜರಿ, ಮೆಣಸಿನಕಾಯಿ, ಬದನೆಕಾಯಿ ಅಲ್ಲದೆ ಅರಿಶಿನ ಕೂಡ ಸಾವಯವದ್ದೇ ಆಗಿದೆ. ಅರಿಶಿನದ ಹೂವಿನ ಅಂದವನ್ನು ವರ್ಣಿಸುತ್ತ ಅದು ಹೂ ಬಿಟ್ಟಾಗ ತೆಗೆದ ಫೋಟೊವನ್ನು ಖುಷಿಯಿಂದ ತೋರಿಸುತ್ತಾರೆ.

ಅನೇಕ ಆಲಂಕಾರಿಕ ಗಿಡಗಳನ್ನಲ್ಲದೆ ಹಲವಾರು ಔಷಧೀಯ ಗಿಡಗಳನ್ನು ಬೆಳೆಸಿದ್ದಾರೆ. ಅಲ್ಲದೆ ನಮಗೆ ನಿತ್ಯವೂ ಕಾಣಸಿಗುವ ಸಸ್ಯಗಳು ಹೇಗೆ ಔಷಧಕ್ಕೆ ಬಳಕೆಯಾಗುತ್ತವೆ ಎಂಬ ಮಾಹಿತಿಯನ್ನು ನೀಡುತ್ತಾ ಪತ್ತರ್ ಚಟ್ಟಾ ಎಂಬ ಪುಟ್ಟ ಗಿಡವು ಕಿಡ್ನಿ ಸ್ಟೋನ್‌ಗೆ ಉತ್ತಮ ಮದ್ದಾಗಿದೆ ಎಂದು ಹೇಳುತ್ತಾರೆ. ಆಲ್ ಸ್ಪೈಸ್ ಎಂಬ ಗಿಡದ ಒಂದು ಎಲೆಯನ್ನು ಬೇಯುವಾಗ ಹಾಕಿದರೆ ಮೆಣಸು, ಲವಂಗ, ಚಕ್ಕೆಯ ಘಮ ಅನ್ನಕ್ಕೆ ಸೇರಿಕೊಳ್ಳುತ್ತದೆ. ಬೊಕೊಯ್ (Bokchoi) ಎಂಬ ಹಚ್ಚ ಹಸಿರಿನ ಸಸ್ಯ ನೋಡಲೂ ಸುಂದರವಾಗಿದೆ.

ಲಿಚಿ, ಮಲ್ ಬೆರ‍್ರಿ, ವಾಟರ್ ಆಪಲ್, ಆಪಲ್ ಬೇರ್, ಶುಗರ್ ಪ್ಲಾಂಟ್ (stevia), ವಿಶೇಷ ಆಕಾರದ ಬೇರಿನ ಅಡಿನೇಯಮ್ (Adenium), ಅಜವಾನ, ಅಲೊವೆರಾ, ಲೆಮನ್ ಗ್ರಾಸ್, ಒಂದೆಲಗ, ಅಂಜೂರ, ಸಪೋಟ ಗಿಡಗಳಲ್ಲದೆ ರಬ್ಬರ್ ಗಿಡ, ಬ್ರಹ್ಮಕಮಲ, ಸ್ಟ್ರಿಂಗ್ ಆಫ್ ಹಾರ್ಟ್, ಟರ್ಟಲ್ ವೈನ್, ಅಪರಾಜಿತಾ, ಕಲಾಂಜೊ, ಅಮೆರೆಲಿಸ್ ಲಿಲಿ, ರೇನ್ ಲಿಲಿ (ನಾಲ್ಕು ಬಣ್ಣಗಳಲ್ಲಿ) ಪೆಟುನಿಯಾ ಬಾಲ್ಸಮ್ (ಐದು ಬಣ್ಣಗಳಲ್ಲಿ) ಮೆಕ್ಸಿಕನ್ ಪೆಟುನಿಯಾ ರಿಝೀನಿಯಾ ಮುಂತಾದ ವಿಶೇಷ ಹೂಗಳ ಜಾತ್ರೆಯನ್ನು ಸೀಸನ್‌ನಲ್ಲಿ ನೋಡುವುದೇ ಸಡಗರ ಎನ್ನುತ್ತಾರೆ ಹೂ ನಗುವನ್ನು ಮೊಗದಲ್ಲಿ ಹೊತ್ತ ಯಶೋಧಾ. ಈ ಭಾಗದಲ್ಲಿ ಬೆಳೆಯೋದೇ ಇಲ್ಲ ಅಂದುಕೊಂಡ ಸಂಪಿಗೆ ಮರವನ್ನು ಕೂಡ ಬೆಳೆಸುತ್ತಿದ್ದಾರೆ.



ಮೊಮ್ಮಕ್ಕಳು ತಿಂದ ಐಸ್ ಕ್ರೀಂ ಕಪ್, ಕಿವಿ ಮುರಿದ ಚಹಾದ ಕಪ್, ಎಣ್ಣೆ ಕ್ಯಾನ್‌ಗಳು, ಬಾಟಲಿಗಳು, ಮುರಿದ ಪೈಪುಗಳು, ಬಣ್ಣ ಕಳೆದುಕೊಂಡ ಬಕೆಟ್ಟು, ಮಗ್ಗು, ಯಶೋಧಾ ಅವರ ಕೈಯಲ್ಲಿ ಪೇಂಟ್ ಮಾಡಿಸಿಕೊಂಡು ಚಿತ್ತಾರ ಬರೆದುಕೊಂಡು ಹಸಿರು ಹೊತ್ತ ವನದೇವತೆಗಳಾಗುತ್ತವೆ. ಆನೆಯಾಗುತ್ತವೆ, ಗೊಂಬೆಯಾಗುತ್ತವೆ. ಉದ್ದನೆಯ ಪ್ಲಾಸ್ಟಿಕ್ ಪೈಪು ಬಣ್ಣ ಬಣ್ಣದ ಹೂವನ್ನು ಹೊತ್ತು ತೂಗೊ ಮಣೆಯಂತೆ ಕಂಗೊಳಿಸುತ್ತದೆ. ಬಿಸಿ ಹಬೆ ತೆಗೆದುಕೊಳ್ಳುವ ಮಷಿನ್ನಿನ ಹಾಳಾದ ಪಾರ್ಟನ್ನು ಸಹ ಬಳಸಿ ಅದರಲ್ಲೂ ಪುಟ್ಟ ಗಿಡಕ್ಕೆ ನೆಲೆ ಮಾಡಿದ್ದಾರೆ ಯಶೋಧಾ.

ಜೇಡ್ ಎಂಬ ಪುಟ್ಟ ಸಸ್ಯದ ಗುಣಸ್ವಭಾವ ತಿಳಿದುಕೊಂಡಿದ್ದು, ಅದರಿಂದಲೇ ಮಾಡಲಾದ ಆಕರ್ಷಕ ಕಮಾನಿಗೆ ಜೋಕಾಲಿ ಕಟ್ಟಿ ಪುಟ್ಟ ರಾಧಾ ಕೃಷ್ಣನನ್ನು ಕೂಡಿಸಿದ್ದಾರೆ.

ಪುಟ್ಟ ಕುಂಡದಲ್ಲಿಯೇ ಜೇಡ್ ನವಿಲು ಆಕಾರಗೊಂಡಿದೆ. ಜೇಡದ ಮಂಟಪದಲ್ಲಿ ಗಣಪತಿ, ರಾಧಾ ಕೃಷ್ಣ, ಹಸು, ಪಕ್ಷಿ ಏನೆಲ್ಲವುಗಳು ಮನಸ್ಸಿಗೆ ಮುದಗೊಳಿಸುತ್ತವೆ. ಈ ಹಸಿರು ಮಾಳಿಗೆಯನ್ನು ನೋಡಿಯೇ ಸುಖಿಸಬೇಕು. ನೋಡಲು ಹೋದವರಿಗೆಲ್ಲ ಒಂದಷ್ಟು ಗಿಡಗಳನ್ನು ಕೊಟ್ಟು ನೀವೂ ಬೆಳೆಸಿ ಎನ್ನುತ್ತಾರೆ.

ಸಸ್ಯಗಳನ್ನು ಬೆಳೆಸುವ ಹೊಸ ಹೊಸ ವಿಧಾನ, ಪ್ರಯೋಗವನ್ನು ಅಳವಡಿಸಿಕೊಳ್ಳುವ ತಾಯಿ ಮಗನ ಉತ್ಸಾಹ ಮೆಚ್ಚುವಂಥದ್ದು. ಶೋ ಗಿಡಗಳು, ತರಕಾರಿ ಗಿಡಗಳು, ಹಣ್ಣಿನ ಗಿಡಗಳು, ನಾನಾ ತರಹದ ಕ್ಯಾಕ್ಟಸ್, ಬಳ್ಳಿಗಳು, ಹೂವಿನ ಗಿಡಗಳು, ಔಷಧಿ ಸಸ್ಯಗಳು, ಅನೇಕ ವಿದೇಶಿ ತಳಿಯ ಗಿಡಗಳು ಇಲ್ಲಿ ಕಾಣಸಿಗುತ್ತವೆ.

ಗಿಡಮರ ಬೆಳೆಸಲು ಜಾಗವಿಲ್ಲ, ನಮಗೇ ನೀರಿಲ್ಲ ಗಿಡಕ್ಕೆಲ್ಲಿ ನೀರು ತರೋದು, ಕಲಬುರಗಿಯ ಬಿಸಿಲಿಗೆ ಯಾವ ಗಿಡ ಬೆಳೆಯುತ್ತದೆ ಎಂಬ ಹೇಳಿಕೆಗಳಿಗೆ ಉತ್ತರದಂತಿದೆ ಯಶೋಧಾ ಅವರ ಮನೆಯ ಈ ಹಸಿರು ಟೆರೇಸು.

